ಸಿಸಿ ನಂ. 225/2022 ಪಿಡಬ್ಲೂ :1

ದಿನಾಂಕಃ 25-01-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಫಿರ್ಯಾದುದಾರ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ಠರಾವಿನ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು , ಆರೋಪಿಯು ನೀಡಿದ ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು . ನಿಪಿ-2 ರಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ . ಸದರಿ ಸಹಿಯನ್ನು ನಿಪಿ -2 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸದರಿ ನೋಟಿಸನ್ನು ಆರೋಪಿಯು ಸ್ವೀಕರಿಸದ ಕಾರಣ ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇನೆ . ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು . ಸದರಿ ಅಂಚೆ ಲಕೋಟೆಯನ್ನು ನಿಪಿ -6 ಎಂದು, ಅದರ ಒಳಗಿದ್ದ ನೋಟಿಸನ್ನು ನಿಪಿ-7 ಎಂದು ಗುರುತಿಸಲಾಯಿತು.

( ಮುಂದುವರೆದ ಮುಖ್ಯ ವಿಚಾರಣೆ  ಕೋರಿಕೆಯ ಮೇರೆಗೆ   ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.